

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ 19 'ಹೆಲ್ತ್ ವಾರಿಯರ್ಸ್'ಗೆ ಭಾರತೀಯ ವಾಯುಪಡೆಯಿಂದ ಹೆಲಿಕಾಪ್ಟರ್ ಮೂಲಕ ಹೂಮಳೆ ಸುರಿಸಿ ಗೌರವ ಸಮರ್ಪಣೆ.

ದೇಶದ ವಿವಿಧ ಭಾಗಗಳಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಸೋಂಕು ತಗುಲಿ ಕೆಲವು ದಾದಿಯರು ಸಾವಿಗೀಡಾಗಿದ್ದರೂ, ಧೈರ್ಯದಿಂದ ಕಾರ್ಯ ನಿರ್ವಹಿಸುತ್ತಿರುವುದು ಅವರ ಸೇವಾ ಮನೋಭಾವಕ್ಕೆ ಉದಾಹರಣೆ.

ಆರೋಗ್ಯ ಶುಶ್ರೂಷೆಯ ಕ್ಷೇತ್ರದಲ್ಲಿ ಶೇ. 90ರಷ್ಟು ಮಹಿಳೆಯರೇ ಕೆಲಸ ಮಾಡುತ್ತಾರೆ. ಸಹನೆ ಹಾಗೂ ಮಾತೃತ್ವದ ಗುಣ ಅವರಲ್ಲಿ ಹೆಚ್ಚು. ಅನಾರೋಗ್ಯದಿಂದ ಆಸ್ಪತ್ರೆ ಸೇರಿ, ನೋವು ತಾಳದೆ ಬೊಬ್ಬಿಡುವ, ಚೀರಾಡುವ ರೋಗಿಯನ್ನೂ ತುಂಬಾ ಸಮಾಧಾನಚಿತ್ತದಿಂದ ಮಾತನಾಡಿಸಿ, ಅವರ ಸಮಸ್ಯೆಯನ್ನು ಆಲಿಸಿ, ಅವರಲ್ಲಿ ವಿಶ್ವಾಸವನ್ನು ತುಂಬುವ ಶುಶ್ರೂಷಕಿಯರತ್ತ ಕೋವಿಡ್ ಸಂದರ್ಭದಲ್ಲಿ ಇಡೀ ಜಗತ್ತೇ ಮುಖ ಮಾಡಿ ನಿಂತಿತ್ತು.

ಪ್ರಾಣವನ್ನೇ ಪಣವಾಗಿಟ್ಟುಕೊಂಡು ದುಡಿದರೂ ದಾದಿಯರ ಜೀವನವೇನೂ ಸುಧಾರಿಸಿಲ್ಲ. ತಮಗೆ ಉತ್ತಮ ರಕ್ಷಣಾ ಕವಚಗಳನ್ನು ಮತ್ತು ಕ್ವಾರಂಟೈನ್‌ನಲ್ಲಿದ್ದಾಗ ಪೌಷ್ಟಿಕಾಂಶ ಇರುವ ಆಹಾರ ಕೊಡಬೇಕು ಎಂದು ದೆಹಲಿಯಲ್ಲಿ ಶುಶ್ರೂಷಕಿಯರು ಆಗ್ರಹಿಸಿದ್ದರು. ■

## ಶೋಚನೀಯ ಆರ್ಥಿಕ ಸ್ಥಿತಿ

19

2020 ದೇಶದ ಆರ್ಥಿಕತೆ ವಿಷಯದಲ್ಲಿ ಕರಾಳ ಅಧ್ಯಾಯ. 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ದೇಶವಾಗಿ ಭಾರತ ಹೊರಹೊಮ್ಮಲಿದೆ ಎಂದು ಬಜೆಟ್‌ನಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದರು. ಆ ಹೊತ್ತಿಗಾಗಲೇ ಆರ್ಥಿಕ ಬೆಳವಣಿಗೆಯು ಹಿಮ್ಮುಖ ಚಲನೆ ಆರಂಭಿಸಿತ್ತು. ದಿಢೀರ್ ಅಪ್ಪಳಿಸಿದ ಕೊರೊನಾದಿಂದಾಗಿ, ಅದನ್ನು ನಿಯಂತ್ರಿಸಲು ಮಾರ್ಚ್‌ನಿಂದ ಆರಂಭವಾದ ಲಾಕ್‌ಡೌನ್ ಪ್ರಯೋಗಗಳ ಪರಿಣಾಮ ದೇಶ ತತ್ತರಿಸಿತು. ಶಿಥಿಲಗೊಂಡಿದ್ದ ಆರ್ಥಿಕತೆ ನೆಲಕಚ್ಚಿತು.

ಎರಡು ವರ್ಷಗಳ ಹಿಂದೆ 8.2% ಇದ್ದ ಜಿಡಿಪಿ ದರ ಕ್ರಮೇಣ ಕುಸಿಯುತ್ತಾ ಸಾಗಿ ಕ್ಯಾಲೆಂಡರ್ ವರ್ಷ 2020ರ ಆರಂಭದ ತ್ರೈಮಾಸಿಕದಲ್ಲಿ (ಜನವರಿ – ಮಾರ್ಚ್) ಶೇ.3.1ಕ್ಕೆ ಕುಸಿಯಿತು. ಆರ್ಥಿಕ ವರ್ಷ ಆರಂಭದ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್ – ಜೂನ್) ಕುಸಿತದ ಹಾದಿಯಲ್ಲಿದ್ದ ದೇಶದ ಆರ್ಥಿಕತೆ ಕೊರೊನಾ ಹೊಡೆತಕ್ಕೆ ಪಾತಾಳಕ್ಕೆ ಬಿತ್ತು. ಈ ತ್ರೈಮಾಸಿಕದಲ್ಲಿ ಮೈನಸ್ 23.9 ಪರ್ಸೆಂಟಿಗೆ ಜಿಡಿಪಿ ಕುಸಿಯಿತು. ಒಟ್ಟಾರೆ ಜಿಡಿಪಿ ಮೌಲ್ಯ 26.35 ಲಕ್ಷ ಕೋಟಿ ರೂ.ಗೆ ಇಳಿಯಿತು. ವರ್ಷದ ಹಿಂದೆ ಇದೇ ಹೊತ್ತಿನಲ್ಲಿ 35.35 ಲಕ್ಷ ಕೋಟಿ ರೂ.ನಷ್ಟಿತ್ತು. ಅಂದರೆ ಮೂರು ತಿಂಗಳಿನಲ್ಲಿ 8.45 ಲಕ್ಷ ಕೋಟಿ ರೂ. ನಷ್ಟವಾಗಿತ್ತು. ಮತ್ತೊಂದು ಕಡೆ, ಇ–ಕಾಮರ್ಸ್, ಕೃಷಿ, ಔಷಧ ಮತ್ತಿತರ ವಲಯಗಳು ಚುರುಕಾಗಿದ್ದವು.

ದೇಶದ ಆರ್ಥಿಕತೆ ಪಾತಾಳಕ್ಕೆ ಕುಸಿದಿರಬಹುದು. ಆದರೆ, ಇಂಗ್ಲಿಷಿನ 'ವಿ' ಆಕಾರದಲ್ಲಿ ಚೇತರಿಕೆ ಕಾಣಲಿದೆ ಎನ್ನುವ ಆಶಾವಾದ ಸ್ವಲ್ಪ ಪ್ರಮಾಣದಲ್ಲಿ ನಿಜವಾಗುತ್ತಿದೆ. ನಿರೀಕ್ಷೆಗೂ ಮೀರಿ ಆರ್ಥಿಕತೆ ಚೇತರಿಸಿಕೊಳ್ಳುತ್ತಿರುವ ಲಕ್ಷಣಗಳು ಗೋಚರಿಸುತ್ತಿವೆ. ಎರಡನೇ ತ್ರೈಮಾಸಿಕದಲ್ಲಿ (ಜುಲೈ – ಸೆಪ್ಟೆಂಬರ್) ಜಿಡಿಪಿ ಮೈನಸ್ 7.5 ಪರ್ಸೆಂಟ್‌ನಷ್ಟಿದೆ. ಋಣಾತ್ಮಕ ಬೆಳವಣಿಗೆ ಇದಾದರೂ, ಕುಸಿತದ ಮಟ್ಟ ಗಣನೀಯವಾಗಿ ಕಡಿಮೆಯಾಗಿದೆ. ಮೊದಲ ತ್ರೈಮಾಸಿಕದ ಮೈನಸ್ 23.7 ಪರ್ಸೆಂಟ್‌ಗೆ ಹೋಲಿಸಿದರೆ ಇದು ಉತ್ತಮ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಋಣಾತ್ಮಕ ಮಟ್ಟದಲ್ಲಿಯೇ ಮುಂದುವರಿದು, ಮುಂದಿನ ಹಣಕಾಸು ವರ್ಷದ (2021 – 22) ಹೊತ್ತಿಗೆ ಸಕಾರಾತ್ಮಕತೆ ಸಾಧ್ಯವಾಗಲಿದೆ. 2021ರ ಹಣಕಾಸು ವರ್ಷದಲ್ಲಿ ಒಟ್ಟಾರೆ ಜಿಡಿಪಿ ಮೊದಲಿನ ಶೇ.78ಕ್ಕೆ ಮುಟ್ಟಬಹುದು ಎನ್ನುವುದು ವಿಶ್ವಬ್ಯಾಂಕ್, ಆರ್‌ಬಿಐ ಸೇರಿದಂತೆ ಬಹುತೇಕ ಸಂಸ್ಥೆಗಳ ಲೆಕ್ಕಾಚಾರ. ವಿತ್ತೀಯ ಕೊರತೆ, ಏರುತ್ತಿರುವ ಹಣದುಬ್ಬರ, ಜಿಎಸ್‌ಟಿ ಸಂಗ್ರಹದಲ್ಲಿ ಶೇ. 40 ಕುಸಿತದ ಅಂಶಗಳು ಸರ್ಕಾರಕ್ಕೆ ತಲೆನೋವಾಗಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬ್ಯಾರೆಲ್‌ಗೆ 50 ಡಾಲರ್ ಸನಿಹದಲ್ಲಿದ್ದು, ದೇಶದ ಪಾಲಿಗೆ ಇದೊಂದು ಕೆಟ್ಟ ಸಮಾಚಾರ. ■



## ರೈತರು ಬಂದರು ದಾರಿಬಿಡಿ

20

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯನ್ನು ಕೇಂದ್ರವಾಗಿರಿಸಿಕೊಂಡು ರೈತರು ನಡೆಸುತ್ತಿರುವ ಪ್ರತಿಭಟನೆ 2020ರ ಪ್ರಮುಖ ವಿದ್ಯಮಾನಗಳಲ್ಲೊಂದು. ಚಳವಳಿಗಳ ಕಾಲ ಮುಗಿದುಹೋಯಿತು ಎನ್ನುವ ಸಂದರ್ಭದಲ್ಲಿ ಲಕ್ಷಾಂತರ ರೈತರು, ಕೊರೊನಾ ಸೋಂಕಿನ ಆತಂಕ ಮತ್ತು ತೀವ್ರ ಚಳಿಯ ಪ್ರತಿಕೂಲ ವಾತಾವಾರಣದಲ್ಲೂ ದೆಹಲಿಯಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿರುವುದು ಅಂತರರಾಷ್ಟ್ರೀಯ ಗಮನವನ್ನು ಸೆಳೆದಿದೆ.

ಕೇಂದ್ರದ ಮೂರು ಕೃಷಿ ಕಾನೂನುಗಳು ರೈತರು ಮತ್ತು ಭೂಹೀನ ಕಾರ್ಮಿಕರ ಹಿತಾಸಕ್ತಿಗೆ ವಿರುದ್ಧವಾಗಿವೆ ಎನ್ನುವುದು ಚಳವಳಿ ನಿರತ ರೈತರ ದೂರು. 'ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತರಲು ಸಿದ್ಧ. ಮಾತುಕತೆಗೆ ಬನ್ನಿ' ಎಂದು ಸರ್ಕಾರ ಸಂಧಾನಕ್ಕೆ ಮುಂದಾಗಿದೆ. ಆದರೆ, ಮೂರು ಮಸೂದೆಗಳನ್ನು ರದ್ದುಪಡಿಸುವುದರ ಹೊರತು ಬೇರೆ ಆಯ್ಕೆಗಳನ್ನು ನಾವು ಒಪ್ಪುವುದಿಲ್ಲ ಎಂದು ರೈತರು ಪಟ್ಟುಹಿಡಿದಿದ್ದಾರೆ. ಎಷ್ಟು ಕಾಲವಾದರೂ ಚಿಂತೆಯಿಲ್ಲ, ಸರ್ಕಾರ ತನ್ನ ನಿರ್ಧಾರ ಹಿಂಪಡೆಯುವವರೆಗೂ ಚಳವಳಿ ನಿಲ್ಲುವುದಿಲ್ಲ ಎನ್ನುವುದು ಅವರ ಪಟ್ಟು.

ರೈತರ ಚಳವಳಿಯನ್ನು ರಾಜಕೀಯಪ್ರೇರಿತ, ಚಳವಳಿಯಲ್ಲಿ ತೊಡಗಿರುವವರು ರೈತರಲ್ಲ, ಅವರು ಪ್ರತ್ಯೇಕತಾವಾದಿಗಳು, ಚಳವಳಿ ಒಂದು ರಾಜ್ಯಕ್ಕಷ್ಟೇ ಸೀಮಿತವಾಗಿದೆ ಎಂದು ಕೇಂದ್ರ ಸರ್ಕಾರದ ಕೆಲವು ಸಚಿವರು ಆರೋಪಿಸಿದ್ದಾರೆ. ರೈತರ ಆದಾಯವನ್ನು ಹೆಚ್ಚಿಸಲು ಮತ್ತು ಕೃಷಿ ಕ್ಷೇತ್ರವನ್ನು ಲಾಭದಾಯಕವಾಗಿಸಲು ಕೇಂದ್ರ ಸರ್ಕಾರ ಕಳೆದ ಆರು ವರ್ಷಗಳಲ್ಲಿ ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ ಎನ್ನುತ್ತಿರುವ ಕೇಂದ್ರ ಸರ್ಕಾರ, ತಾನು ರೈತಪರವಾಗಿರುವುದಾಗಿ ಹೇಳಿಕೊಳ್ಳುತ್ತಿದೆ. ಇನ್ನೊಂದೆಡೆ, ಕೇಂದ್ರ ಸರ್ಕಾರ ನೀಡಿದ್ದ ಗೌರವ–ಪುರಸ್ಕಾರಗಳನ್ನು ಹಿಂದಿರುಗಿಸಿ ಕಲಾವಿದರು, ಕ್ರೀಡಾಪಟುಗಳು ರೈತರ ಚಳವಳಿಗೆ ಬೆಂಬಲ ಸೂಚಿಸುತ್ತಿದ್ದಾರೆ.

ರೈತರ ಚಳವಳಿ ರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸುವ ಮುನ್ನ ಪರಿಹಾರ ಕಂಡುಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದ್ದು, ಶಾಂತಿಯುತವಾಗಿ ಪ್ರತಿಭಟನೆ ನಡೆಸುವ ಹಕ್ಕು ರೈತರಿಗಿದೆ ಎಂದು ಹೇಳಿದೆ.

ಪ್ರತಿಕ್ರಿಯಿಸಿ: feedback@sudha.co.in